## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ

**ಎಸ್.ಸಿ.ನಂಃ 10004/2024**

**ಚಾಸಾ ಃ 1**

**ಪ್ರಾಸಾ ಃ 5**

| | | |
|---|---|---|
| ಹೆಸರು | ಃ | ಮರಿಯ ಪುಷ್ಪಮ್ |
| ಗಂಡನ ಹೆಸರು | ಃ | ಜಾನ್ಸನ್ |
| ವಯಸ್ಸು | ಃ | 53 ವರ್ಷ |
| ವೃತ್ತಿ | ಃ | ಮನೆ ಕೆಲಸ |
| ವಾಸ | ಃ | ಪಲ್ಲೆಹಿಡಿ, ಕನ್ಯಾಕುಮಾರಿ ಜಿಲ್ಲೆ, ತಮಿಳುನಾಡು |

**ಈ ದಿನ ದಿನಾಂಕಃ 28-10-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಸದರಿ ಸಾಕ್ಷಿದಾರರು ತನಗೆ ತಮಿಳು ಭಾಷೆ ಮಾತನಾಡುತ್ತಿದ್ದು ತಮಿಳು ಭಾಷೆಯಲ್ಲಿ ಮಾತನಾಡುವುದನ್ನು ಹೊರತು ಪಡಿಸಿ ಬೇರೆ ಭಾಷೆಯಲ್ಲಿ ಮಾತನಾಡಲು ಬರುವುದಿಲ್ಲವೆಂದು ಮತ್ತು ತನಗೆ ಕನ್ನಡ ಓದಲು ಮತ್ತು ಬರೆಯಲ ಬರುವುದಿಲ್ಲವೆಂದು ತಿಳಿಸಿದ್ದರಿಂದ ಅರುಣಕುಮಾರ ಎಂಬುವವರು ತಾನು ತಮಿಳುನಾಡು ಆಗಿದ್ದು ತಾನು ಬೆಂಗಳೂರಿನ ಬಾಣಸವಾಡಿಯಲ್ಲಿ ಬಿ.ಸಿ.ಎ ಓದುತ್ತಿದ್ದು ತನಗೆ ತಮಿಳು ಮತ್ತು ಕನ್ನಡ ಗೊತ್ತಿದ್ದು ಮಾತನಾಡಲು ಬರುತ್ತದೆಂದು ತಿಳಿಸಿದ್ದರಿಂದ ಆತನನ್ನು ಭಾಷಾಂತರಕಾರನಾಗಿ ನೇಮಿಸಿದ್ದು ಮಾನ್ಯ ಸರ್ಕಾರಿ ಅಭಿಯೋಜಕರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಸದರಿ ಭಾಷಾಂತರಕಾರನು ತಮಿಳಿನಲ್ಲಿ ಸಾಕ್ಷಿಗೆ ತಿಳಿಸಿದ್ದು ಸದರಿ ಸಾಕ್ಷಿದಾರರು ತಮಿಳು ಭಾಷೆಯಲ್ಲಿ ನೀಡಿದ ಉತ್ತರವನ್ನು ಕನ್ನಡಕ್ಕೆ ಭಾಷಾಂತರಗೊಳಿಸಿ ಹೇಳಿದ್ದರಿಂದ ಸಾಕ್ಷಿದಾರರ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು. ಈಬಗ್ಗೆ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ. ಅಲ್ಲದೇ ಸದರಿ ಭಾಷಾಂತರಕಾರರು ತನ್ನ ಗುರುತಿಸುವಿಕೆಯ ಸಲುವಾಗಿ ಚಾಲನಾ ಪರವಾನಗಿ ನಕಲನ್ನು ನೀಡಿರುತ್ತಾರೆ. ಅದನ್ನು ನ್ಯಾಯಾಲವು ದೃಢೀಕರಿಸಿರುತ್ತದೆ.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

**1.** ಆರೋಪಿ ಗೊತ್ತಿರುತ್ತಾನೆ. ಆತನು **3** ನೇ ಮಗಳು ಮೃತೆ ಜನೀಲಾ ಜೋಬಿ ಗಂಡನಿರುತ್ತಾನೆ. ನನಗೆ **3** ಜನ ಹೆಣ್ಣು ಮಕ್ಕಳು ಇರುತ್ತಾರೆ ಮತ್ತು ಗಂಡು ಮಕ್ಕಳು ಯಾರಾ ಇರುವುದಿಲ್ಲ. ಮೊದಲನೇ ಮಗಳ ಹೆಸರು ಬ್ಯೂಲಾ ಜಾಸ್ಮಿ ಇರುತ್ತದೆ, ಎರಡನೇ ಮಗಳ ಹೆಸರು ಅಜಿಲಾ ಜೋನಿ ಇರುತ್ತದೆ ಮತ್ತು ಮೂರನೇ ಮಗಳ ಹೆಸರು ಜನಿಲಾ ಜೋನಿ ಇರುತ್ತದೆ. ನನ್ನ ಗಂಡನಿಗೆ ಹಾಲೋ ಬ್ರಿಕ್ಸ ಕಂಪನಿಯನ್ನು ನಡೆಸುತ್ತಿದ್ದಾರೆ.

**2.** ನನ್ನ **3** ನೇ ಮಗಳು ಜನೀಲಾ ಜೋಬಿಯ ಮದುವೆಯು ಶಾಮ್ ಮರಿಯಾದಾಸ್ ನೊಂದಿಗೆ ದಿನಾಂಕಃ **01-06-2022** ರಂದು ಕನ್ಯಾಕುಮಾರಿಯ ಪಲ್ಲಿಹಡಿ ಆಡಿಟೋರಿಯಮ್ ನಲ್ಲಿ ಮದುವೆ ಆಗಿರುತ್ತದೆ. ಶಾಮ್ ಮರಿಯಾದಾಸನು ದೊಡ್ಡಬಳ್ಳಾಪುರದ ಶ್ರೀನಗರದವನಾಗಿದ್ದನು.

ಎಸ್.ಸಿ.ನಂಃ 10004/2024

ಪ್ರಾಸಾಃ 5

3. ಮದುವೆಯಾದ ನಂತರ ಶಾಮ ಮರಿಯಾದಾಸ್ ನು ಮತ್ತು ನನ್ನ ಮಗಳು ಮತ್ತು ಗಂಡನ ತಂದೆ ತಾಯಿಯು ದೊಡ್ಡಬಳ್ಳಾಪುರದ ಶ್ರೀನಗರದಲ್ಲಿ ವಾಸವಾಗಿದ್ದರು. ಮದುವೆಯಾದ ನಂತರ 3 ತಿಂಗಳವರೆಗೆ ಚೆನ್ನಾಗಿದ್ದರು. ನಂತರ ಅವರ ನಡುವೆ ಜಗಳ ಆಗುತ್ತಿತ್ತು ಮತ್ತು ಸದರಿ ವಿಚಾರವನ್ನು ನನ್ನ ಮಗಳು ಪೋನ್ ಮೂಲಕ ತಿಳಿಸುತ್ತಿದ್ದಳು. ಅಲ್ಲದೇ ತನ್ನ ಗಂಡನು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಬೇರೆ ಹೆಣ್ಣಿನೊಂದಿಗೆ ಮಾತನಾಡುತ್ತಾನೆಂದು ಮತ್ತು ತನ್ನ ಜೊತೆ ಚೆನ್ನಾಗಿ ಮಾತನಾಡುವುದಿಲ್ಲವೆಂದು ಹೊಡೆಯುತ್ತಿದ್ದನೆಂದು ಪೋನ್ ನಲ್ಲಿ ಹೇಳುತ್ತಿದ್ದಳು.

4. ದಿನಾಂಕಃ 11-04-2023 ರಂದು ರಾತ್ರಿ 09.00 ಗಂಟೆಗೆ ತನ್ನ ಮಗಳು ಜನೀಲಾ ಜೋನಿಯು ತಂದೆಗೆ ಪೋನ್ ಮಾಡಿ ಶಾಮ್ ಮರಿಯಾದಾಸ ತನ್ನ ಜೊತೆ ಜಗಳ ಮಾಡಿ ಕೊಲೆ ಮಾಡುತ್ತೇನೆಂದು ತಿಳಿಸಿರುತ್ತಾನೆ ಎಂದು ಆಕೆಯ ತಂದೆಗೆ ಪೋನ್ ಮಾಡಿ ಹೇಳಿರುತ್ತಾಳೆ. ಆಗ ಅವರ ತಂದೆಯು ಸಮಾಧಾನ ಮಾಡಿ ಎರಡು ದಿನದಲ್ಲಿ ಅಲ್ಲಿಗೆ ಬರುತ್ತೇನೆಂದು ತಿಳಿಸಿರುತ್ತಾರೆ.

5. ನಂತರ ಅದೇ ದಿನ ರಾತ್ರಿ 12.30 ಗಂಟೆಗೆ ಶಾಮ ಮರಿಯಾ ದಾಸ್ ನ ತಂದೆ ಮರಿಯಾ ದಾಸನು ನನ್ನ ಮೊದಲನೇ ಮಗಳ ಗಂಡ ಶಾಮ ನೇಸರಾಜ ರವರಿಗೆ ಪೋನ ಮಾಡಿ ಜನಿಲಾ ಜೋಬಿಗೆ ಗಾಯ ಆಗಿ ರಕ್ತ ಬರುತ್ತಿದೆ ಎಂದು, ಆಸ್ಪತ್ರೆಗೆ ಸೇರಿಸಿರುತ್ತೇವೆ ಎಂದು ಹೇಳಿರುತ್ತಾರೆ ಎಂದು ತಿವಿಸಿರುತ್ತಾರೆ.

6. ದಿನಾಂಕಃ 12-04-2023 ರಂದು ಬೆಳಗ್ಗೆ 04.15 ಗಂಟೆಗೆ ಮರಿಯಾ ದಾಸ್ ನು ಪುನಃ ಶಾಮ ನೇಸರಾಜನಿಗೆ ಪೋನ್ ಮಾಡಿ ಮಗಳು ಮೃತಪಟ್ಟಿರುತ್ತಾಳೆ ಎಂದು ತಿಳಿಸಿರುತ್ತಾರೆ. ಸದರಿ ವಿಚಾರ ತಿಳಿದ ನಂತರ ನಾನು, ನನ್ನ ಗಂಡ, ನನ್ನ ಅಳಿಯ ಶಾಮ ನೇಸರಾಜು ಮತ್ತು ಇತರೆ ಸಂಬಂಧಿಕರು ಬೆಂಗಳೂರಿಗೆ ಬರುತ್ತಿದ್ದೆವು. 250 ಕಿ.ಮೀ ಬಂದಾಗ ನನ್ನ ಗಂಡನಿಗೆ ಎದೆ ನೋವು ಬಂದಿರುತ್ತದೆ. ಆದ್ದರಿಂದ ಅವರನ್ನು ಅಲ್ಲಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಪುನಃ ಅವರನ್ನು ಕನ್ಯಾಕುಮಾರಿಗೆ ವಾಪಾಸು ಕಳುಹಿಸಿರುತ್ತೇವೆ ನಂತರ ನಾವು ಉಳಿದವರು ಬಸ್ ನಲ್ಲಿ ಬೆಂಗಳೂರಿಗೆ ಬಂದು ಪುನಃ ಬಸ್ ನಲ್ಲಿ ದೊಡ್ಡಬಳ್ಳಾಪುರಕ್ಕೆ ಬಂದಿರುತ್ತೇವೆ. ನಂತರ ನಾವು ಪೊಲೀಸ ಠಾಣೆಗೆ ಹೋಗಿರುತ್ತೇವೆ.

7. ದಿನಾಂಕಃ 13-04-2023 ರಂದು ಬೆಳಗ್ಗೆ 02.00 – 02.30 ಗಂಟೆ ಸಮಯದಲ್ಲಿ ಠಾಣೆಯಲ್ಲಿ ನಮ್ಮ ಮಗಳ ಗಂಡ ಶಾಮ ಮರಿಯಾದಾಸ್ ನ ನಮ್ಮ ಮಗಳನ್ನು ಕೊಲೆ ಮಾಡಿರುತ್ತಾನೆ ಎಂದು ದೂರು ನೀಡಿರುತ್ತೇವೆ.

8. ನಾನು ನೀಡಿದ ದೂರನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿದಾರರು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಅದನ್ನು ಗುರುತಿಸಿದ್ದರಿಂದ ಅದನ್ನು ನಿಪಿ 12 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 12(ಎ) ಎಂದು ಗುರುತಿಸಲಾಯಿತು.

9. ನಾನು ಠಾಣೆಯಲ್ಲಿ ತಮಿಳಿನಲ್ಲಿ ಹೇಳಿದ್ದು ಅದನ್ನು ನಮ್ಮ ಸಂಬಂಧಿಕರು ಕನ್ನಡದಲ್ಲಿ

ಪೋಲಿಸರಿಗೆ ಹೇಳಿದ್ದು ಅದನ್ನು ಪೋಲಿಸರು ಕನ್ನಡದಲ್ಲಿ ದಾಖಲಿಸಿರುತ್ತಾರೆ. ದೂರು ನೀಡಿದ ದಿನಾಂಕ 136-04-2023 ರಂದು ಬೆಳಗ್ಗೆ 09.00 ಗಂಟೆಗೆ ಶ್ರೀ ನಗರದಲ್ಲಿರುವ ಶಾಮ ಮರಿಯಾದಾಸ್ ಅವರ ಮನೆಗೆ ನನ್ನನ್ನು ಮತ್ತು ನನ್ನ ಸಂಬಂಧಿಕರನ್ನು ಪೋಲಿಸರು ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಹೋಗಿ ನೋಡಿದಾಗ ಮನೆಯ ಎಂಟ್ರೆನ್ಸಿನಿಂದ ಶಾಮ ಮರಿಯಾದಾಸ ಬೆಡ್ ರೂಮಿನವರೆಗೆ ರಕ್ತ ಬಿದ್ದಿತ್ತು ಮತ್ತು ಬೆಡ್ ಮೇಲೆ ಮತ್ತು ಕೆಳಗೆ ಎಲ್ಲ ರಕ್ತ ಬಿದ್ದಿತ್ತು. ಅಲ್ಲಿ ಪೋಲಿಸರು 3 ಮೊಬೈಲ್‌ಗಳು, ಒಂದು ಲ್ಯಾಪ್ ಟಾಪ್ ವಿಶಾಲ್ ಮಾರ್ಟನಲ್ಲಿ ಚಾಕು ಖರೀದಿಸಿದ ರಸೀದಿ, ಒಂದು ರಕ್ತದ ಬೆಡ್ ಸೀಟು ತೆಗೆದುಕೊಂಡಿರುತ್ತಾರೆ ಮತ್ತು ಕೆಳಗೆ ಬಿದ್ದಿದ್ದ ರಕ್ತವನ್ನು ಮೂರು ಹತ್ತಿಯಿಂದ ತೆಗೆದುಕೊಂಡಿರುತ್ತಾರೆ. ಬೇರೆ ಏನು ತೆಗೆದುಕೊಂಡಿರುತ್ತಾರೆ ಎಂದು ನನಗೆ ಈಗ ನೆನಪಿರುವುದಿಲ್ಲ. ಅಲ್ಲಿಯ ರಕ್ತವನ್ನು ನೋಡಿ ಸುಸ್ತಾಗಿರುತ್ತದೆ. ಮುಂದೇನಾಯಿತು ಎಂದು ಗೊತ್ತಿರುವುದಿಲ್ಲ.

10. ಅಲ್ಲಿದ್ದ ಎಲ್ಲಾ ವಸ್ತುಗಳನ್ನು ಕವರ್ ಮಾಡಿ ಇಟ್ಟು ಬಂದಿರುತ್ತಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದಿರುತ್ತದೆ. ಸದರಿ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 13 ಎಂದು ಗುರುತಿಸಲಾಯಿತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 13(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ ಮಾಡಿರುತ್ತೇನೆ ಎಂದು ನೆನಪಿರುವುದಿಲ್ಲ ಆದರೆ ಸದರಿ ವಸ್ತುಗಳನ್ನು ತೆಗೆದುಕೊಂಡ ನಂತರ ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಅಲ್ಲಿದ್ದ ಪೋಲಿಸರು ಇಲ್ಲಿದ್ದ ವಸ್ತುಗಳನ್ನು ತೆಗೆದುಕೊಂಡಿರುತ್ತೇವೆ ಎಂದು ಅದಕ್ಕೆ ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ.

11. ಪೋಲಿಸರು ಅಲ್ಲಿ ಅಂದು ತೆಗೆದುಕೊಂಡು ವಸ್ತುಗಳನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ.

**ಸದರಿ ವಸ್ತುಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಸುತ್ತಿ ಸೀಲು ಹಾಕಿದ್ದರಿಂದ ಸಾಕ್ಷಿದಾರರು ಅದನ್ನು ತೆರೆಯಲು ಅನುಮತಿ ಕೋರಿದ್ದು ನೀಡಲಾಯಿತು.**

ಆದಿನ ತೆಗೆದುಕೊಂಡ 3 ಮೊಬೈಲ್ ಗಳನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಮುದ್ದೆ ಮಾಲು 13 ರಿಂದ 15 ಎಂದು ಗುರುತಿಸಲಾಯಿತು. ಮೂರು ರಕ್ತದ ಹತ್ತಿಗಳನ್ನು ನೋಡಿ ಗುರುತಿಸುತ್ತೇನೆ ಅವುಗಳನ್ನು ಈಗಾಗಲೇ ಮುದ್ದೆ ಮಾಲು 7, 9 ಮತ್ತು 10 ಎಂದು ಗುರುತಿಸಲಾಗಿರುತ್ತದೆ. ಬೆಡ್ ಸೀಟನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 8 ಎಂದು ಗುರುತಿಸಲಾಗಿರುತ್ತದೆ. ಲ್ಯಾಪ್ ಟ್ಯಾಪ್ ಅನ್ನು ನೋಡಿ ಗುರುತಿಸುತ್ತೇನೆ ಅದನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ಮುದ್ದೆ ಮಾಲು 16 ಎಂದು

ಗುರುತಿಸಲಾಯಿತು. ವಿಶಾಲ್ ಮಾರ್ಟ ನ ಬಿಲ್ ನೋಡಿ ಗುರುತಿಸುತ್ತೇನೆ ಅದನ್ನು ನಿಪಿ 14 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೋಗಳನ್ನು ನಾನು ನಮ್ಮ ಅಳಿಯ ಮತ್ತು ಸಂಬಂಧಿಕರು ಅವರ ಮನೆಗೆ ಹೋಗಿದ್ದಾಗ ತೆಗೆದಿರುತ್ತಾರೆ ಸದರಿ ಸಾಕ್ಷಿದಾರರು ಪೋಟೋದಲ್ಲಿ ನಾನು, ನನ್ನ ಅಳಿಯ ಮತ್ತು ಪೋಲಿಸರು ಹಾಗೂ ಅಲ್ಲಿ ಬಂದವರು ಇರುತ್ತಾರೆ. ಸದರಿ ಪೋಟೋದಲ್ಲಿ ತಾನು ಮತ್ತು ಇತರರು ಇರುವುದನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ 15 ಮತ್ತು 16 ಎಂದು ಗುರುತಿಸಲಾಯಿತು. ಅಲ್ಲಿ ಪೋಲಿಸರು ಬೆಳಗಿನ ಜಾವ 09.00 ಗಂಟೆಯಿಂದ 10.30 ಗಂಟೆಯವರೆಗೆ ಇದ್ದರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

**15.** ಶಾಮ ಮರಿಯಾದಾಸನ ತಂದೆ ತಾಯಿಯ ಸ್ವಂತ ಊರು ಎಟ್ಟಣಿ ಎಂದು ಕನ್ಯಾಕುಮಾರಿ ಬಳಿ ಇರುತ್ತದೆ. ನಮ್ಮ ಊರಿಗೂ ಅವರ ಊರಿಗೆ 1 ಕಿ.ಮೀ ಅಂತರವಿರುತ್ತದೆ. ಎಲ್ಲರೂ ಕನ್ಯಾಕುಮಾರಿಯವರೇ ಇರುತ್ತೇವೆ ಎಂದರೆ ಸರಿ.

**16.** ಮರಿಯಾದಾಸನ ತಂಗಿಯು ಮದುವೆ ಸಂಬಂಧವನ್ನು ತಂದಿರುತ್ತಾರೆ. ಸಂಬಂಧ ಬಂದಾಗ ಶಾಮ ಮರಿಯಾದಾಸನು ಒಳ್ಳೆಯ ಹುಡುಗ ಎಂದು ತಿಳಿದುಬಂದಿರುತ್ತದೆ ಎಂದರೆ ಎಲ್ಲರೂ ಸಹ ಒಳ್ಳೆಯವನೇ ಎಂದು ಹೇಳಿರುತ್ತಾರೆ. ನಾವು ಮಗಳ ಶವ ಸಂಸ್ಕಾರವನ್ನು ಶಾಮ ಮರಿಯಾದಾಸನ ತಾಯಿಯ ಆಸ್ತಿಯಲ್ಲಿ ಸೇರಿ ಮಾಡಿರುತ್ತೇವೆ ಎಂದರೆ ಸರಿ. ಅದೇ ರೀತಿ ಸಣ್ಣ ರೀತಿಯಲ್ಲಿ ಸಮಾಧಿ/ ಗೋರಿಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ.

**17.** ಮದುವೆಯ ನಂತರ 6 ತಿಂಗಳು ಒಳಗೆ ಮದುವೆಯನ್ನು ನೋಂದಣಿ ಮಾಡಿಸಲು ಒಮ್ಮೆ ಮಾತ್ರ ಊರಿಗೆ ಬಂದಿರುತ್ತಾರೆ. ಯಾವ ತಿಂಗಳಿನಲ್ಲಿ ಬಂದಿರುತ್ತಾರೆ ಎಂದು ನೆನಪಿರುವುದಿಲ್ಲ. 2-3 ದಿನ ಅವರ ಅಜ್ಜಿಯ ಮನೆಯಲ್ಲಿ ಇದ್ದರು. ನಮ್ಮ ಮನೆಗೆ 1 ದಿನ ಬಂದಿರುತ್ತಾರೆ. ಮದುವೆಯಾದ 3 ತಿಂಗಳು ಒಳಗೆ ಬಂದಿದ್ದರಿಂದ ಯಾವುದೇ ದೂರು ಹೇಳಿರುವುದಿಲ್ಲ. ನಮ್ಮ ಸ್ವಂತ ಮನೆ ಇರುತ್ತದೆ. 2010 ರಂದು ಅದನ್ನು ಕಟ್ಟಿರುತ್ತೇವೆ.

**18.** 2023 ರ ಮಾರ್ಚ ತಿಂಗಳಿನಲ್ಲಿ ಮನೆಯಲ್ಲಿ ಹಾಲು ಉಕ್ಕಿಸುವ ಕಾರ್ಯಕ್ರಮ ಮಾಡಿರುತ್ತೇವೆ ಎಂದರೆ ಸರಿಯಲ್ಲ ಪ್ರಾರ್ಥನೆ ಮಾಡಿರುತ್ತೇವೆ. 2023 ರ ಮಾರ್ಚ 16 ರಂದು ಪ್ರಾರ್ಥನೆ ಕಾರ್ಯಕ್ರಮ ಇಟ್ಟುಕೊಂಡಿದ್ದೆವು. ನಾವು ಕ್ರಿಶ್ಚಿಯನ್ ರಾಗಿದ್ದರಿಂದ ಫಾದರ್ ರನ್ನು ಇಟ್ಟುಕೊಂಡು ಪ್ರಾರ್ಥನೆ ಮಾಡಿರುತ್ತೇವೆ. 2023 ರ ಮಾರ್ಚ 16 ರಂದು ಪ್ರಾರ್ಥನೆ ಕಾರ್ಯಕ್ರಮ ಇಟ್ಟುಕೊಳ್ಳಲು ಯಾವುದೇ ವಿಶೇಷತೆ ಇರಲಿಲ್ಲ ಯಾವಾಗ ಬೇಕೋ ಅವಾಗ ಇಟ್ಟುಕೊಳ್ಳುತ್ತೇವೆ.

**19.** 2022 ರ ನವೆಂಬರ್ ನಿಂದ 2023 ರ ಮಾರ್ಚ 16 ರ ವರೆಗೆ ಯಾವ ಯಾವ ದಿನಾಂಕದಂದು ಪ್ರಾರ್ಥನೆ ಕಾರ್ಯಕ್ರಮ ಇಟ್ಟುಕೊಂಡಿದ್ದೆವು ಎಂದು ನಿಖರವಾಗಿ ದಿನಾಂಕ ಹೇಳಲು ಬರುವುದಿಲ್ಲ. 2022 ರ ನವೆಂಬರ್ ನಿಂದ 2023 ರ ಮಾರ್ಚ 16 ರ ವರೆಗೆ ನಾವು

ನಡೆಸಿದ ಎಷ್ಟು ಪ್ರಾರ್ಥನೆ ಕಾರ್ಯಕ್ರವುದಲ್ಲಿ ಪಾಸ್ಟರ್ ಅವರು ಬಂದಿರುತ್ತಾರೆ ಎಂದು ಈಗ ನನಗೆ ಹೇಳಲು ಬರುವುದಿಲ್ಲ. ಆದರೆ ಕೆಲವು ಸಮಯ ಬಂದಿರುತ್ತಾರೆ. 2023 ರ ಮಾರ್ಚ 16 ರಂದು ನಡೆದ ನಮ್ಮ ಪ್ರಾರ್ಥನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪಾಸ್ಟರ್ ಅವರ ಹೆಸರು ಈಗ ನೆನಪಿರುವುದಿಲ್ಲ.

**20.** ಕನ್ಯಾಕುಮಾರಿಯಲ್ಲಿ ನಾವು ಹೋಗುತ್ತಿದ್ದ ಚರ್ಚನ ವಿಳಾಸ ಗೊತ್ತಿರುವುದಿಲ್ಲ. ನನ್ನ ಮಗಳ ಮದುವೆಯ ಕ್ರಿಶ್ಚಿಯನ್ ಧರ್ಮದ ಪ್ರಕಾರ ಆಗಿರುತ್ತದೆ. ಶಾಮ ಮರಿಯಾದಾಸ ಅವರು ಹೋಗುತ್ತಿದ್ದ ಚರ್ಚನ ಪಾಸ್ಟರ್ ಅವರು ಮದುವೆ ಮಾಡಿರುತ್ತಾರೆ. ಕ್ರಿಶ್ಚಿಯನ್ ಧರ್ಮದ ಪ್ರಕಾರ ಮದುವೆಯ ಪೂರ್ವದಲ್ಲಿ ಚರ್ಚಿನಲ್ಲಿ ಮಾಹಿತಿ ನೀಡಬೇಕೆಂದರೆ ಸರಿ ಅದನ್ನು ನಾವೂ ಮಾಡಿರುವುದಿಲ್ಲ.

**21.** ನಾನು ಕ್ರಿಶ್ಚಿಯನ್ ಧರ್ಮದ ಯಾವ ಪಂಗಡಕ್ಕೆ ಸೇರಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಜೀಸಸ್ ನ ಪ್ರಾರ್ಥನೆ ಮಾಡುತ್ತೇನೆ. ನಮ್ಮ ಮನೆಯಲ್ಲಿ ಇಟುತ್ತಿದ್ದ ಪ್ರಾರ್ಥನೆ ಕಾರ್ಯಕ್ರಮಕ್ಕೆ ಯಾರೂ ಬೇಕಾದರೂ ಪಾಸ್ಟರ್ ಬರುತ್ತಾರೆ. ನಿಖರವಾಗಿ ನಮ್ಮ ಕುಟಂಬದವರಿಗೆ ಇಂತಹುದೇ ಎಂದು ಯಾವುದೇ ಚರ್ಚ ಇರುವುದಿಲ್ಲ.

**22.** ನಮ್ಮ ಶಾಲಾ ದಾಖಲೆಯಲ್ಲಿ ಬಿ.ಸಿ. ಕ್ರಿಶ್ಚಿಯನ್ ಎಂದು ದಾಖಲಿಸಿರುತ್ತೇವೆ. ಮದುವೆಯಾದ ನಂತರ ನಾನು ಮರಿಯಾದಾಸ್ ಮನಗೆ ಒಮ್ಮೆ ಮಾತ್ರ ರಿಸೆಪ್‌ಸೆನ್‌ಗೆ ಇದ್ದಾಗ ಮಾತ್ರ ಬಂದಿರುತ್ತೇನೆ. ಮದುವೆ ನೋಂದಣಿ ಪಡಿಸಲು ಬಂದಾಗ ಮದುವೆ ದಾಖಲೆಯನ್ನು ಪಡೆದುಕೊಂಡು ಹೋಗಿರುತ್ತಾರೆ. ಮನೆ ಕಟ್ಟಿ 2023 ರ ಮಾರ್ಚ 16 ರಂದು ಸದರಿ ಮನೆಯಲ್ಲಿ ಹಾಲು ಉಕ್ಕಿಸಿ ಕಾರ್ಯಕ್ರಮ ಇಟ್ಟುಕೊಂಡಿದ್ದೆವು ಎಂದರೆ ಸರಿಯಲ್ಲ. ಸದರಿ ಕಾರ್ಯಕ್ರಮಕ್ಕೆ ನಮ್ಮ ಮಗಳು ಜನೀಲಾ ಜಬಿ ಮತ್ತು ಅಳಿಯ ಮತ್ತು ಅಳಿಯನ ತಂದೆ ತಾಯಿ 4 ಜನರನ್ನು ಸಹ ಕರೆಸಿದ್ದೆವು ಎಂದರೆ ಸರಿಯಲ್ಲ. ಆ ಕಾರ್ಯಕ್ರಮಕ್ಕೆ ಬಂದ ನಮ್ಮ ಮಗಳು 15 ದಿನಗಳ ಕಾಲ ಅಂದರೆ 16 ನೇ ತಾರೀಖಿನಿಂದ 31 ರವರೆಗೆ ನಮ್ಮ ಮನೆಯಲ್ಲಿಯೇ ಇದ್ದಳು ಎಂದರೆ ಸರಿಯಲ್ಲ.

**23.** ನಮ್ಮ ಮಗಳು ಬಿ.ಎಸ್ಸಿ ನರ್ಸಿಂಗ್ ಓದಿರುತ್ತಾಳೆ. ಅಂದರೆ ರೇಡಿಯೋಥೆರಪಿ ಓದಿರುತ್ತಾಳೆ. ಶಾಲಾ ವಿದ್ಯಾಭ್ಯಾಸದ ದಾಖಲೆಗಳನ್ನು ತೆಗೆದುಕೊಳ್ಳಲು ನಮ್ಮ ಮಗಳು ಆ ಕಾರ್ಯಕ್ರಮದ ನಂತರ ನಮ್ಮ ಊರಿನಲ್ಲಿಯೇ ಉಳಿದಿದ್ದಳು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಮದುವೆಯ ಮುಂಚೆಯೇ ಎಲ್ಲಾ ದಾಖಲೆಗಳನ್ನು ಪಡೆದುಕೊಂಡಿದ್ದಳು. ದಿನಾಂಕಃ 31-03-2023 ರ ನಂತರ ನಮ್ಮ ಮಗಳನ್ನು ಬಿಟ್ಟು ಬರಲು ನಾನೇ ಶಾಮ ಮರಿಯಾದಾಸ ಅವರ ಮನೆಗೆ ಬಂದಿದ್ದೆನು ಎಂದರೆ ಸರಿಯಲ್ಲ.

**24.** 2023 ರ ಮಾರ್ಚ 16 ರಂದು ನಡೆದ ಪ್ರಾರ್ಥನೆ ಕಾರ್ಯಕ್ರಮವನ್ನು ಪಲ್ಲಿಹಡಿಯಲ್ಲಿ ನಡೆಸಿರುತ್ತೇವೆ. ನಮ್ಮ ಮನೆಯ ವಿಸ್ತೀರ್ಣ ಮತ್ತು ಅಂತಸ್ತು ಇರುತ್ತದೆ ಗೊತ್ತಿರುವುದಿಲ್ಲ. ಮದುವೆಯಾದ 3 ತಿಂಗಳು ನಂತರ ಹೊಡೆಯುತ್ತಿದ್ದ ಎಂಬ ಬಗ್ಗೆ ಯಾವುದೇ ದೂರು

ನೀಡಿರುವುದಿಲ್ಲ. ಈ ಪ್ರಕರಣದ ದೂರು ನೀಡುವವರೆಗೆ ನಾನು ಶಾಮ ಮರಿಯಾದಾಸನ ವಿರುದ್ದ ಬೇರೆ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಮ್ಮ ಮಗಳಿಗೆ ತೊಂದರೆ ನೀಡುತ್ತಿದ್ದಾನೆ ಎಂದು ವಕೀಲರ ಮೂಲಕ ಯಾವುದೇ ನೋಟೀಸು ನೀಡಿರುವುದಿಲ್ಲ.

**25.** ದೂರು ನೀಡಲು ಮತ್ತು ನೋಟೀಸು ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಮದುವೆ ಆಗಿ ಮೂರು ತಿಂಗಳು ಆಗಿದ್ದರಿಂದ ಮುಂದೆ ಸುಧಾರಿಸಬಹುದೆಂದು ಸುಮ್ಮನಿದ್ದೆವು. ನಾನು ತಮಿಳು ಮಾದ್ಯಮದಲ್ಲಿ 6 ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಗಂಡ ಏನೂ ಓದಿರುವುದಿಲ್ಲ. 3 ನೇ ಮಗಳ ಮದುವೆಯಾದ ನಂತರ ನಮ್ಮ ನಮ್ಮ ಮನೆಯಲ್ಲಿ ನಾನು ನನ್ನ ಗಂಡ ಇಬ್ಬರು ಮಾತ್ರ ವಾಸವಾಗಿರುತ್ತೇವೆ. ಮೊದಲನೇ ಮಗಳು ಮತ್ತು ಅಳಿಯನು ಮಾರ್ಥಾಂಡಮ್ ನಲ್ಲಿ ವಾಸವಾಗಿರುತ್ತಾರೆ. ಎರಡನೇ ಮಗಳು ಮತ್ತು ಅಳಿಯ ನಾಗರಕೊಯಿಲು ನಲ್ಲಿ ವಾಸವಾಗಿರುತ್ತಾರೆ. ಮಾರ್ಥಾಂಡಮ್ ಮತ್ತು ನಮ್ಮ ಊರಿಗೂ 5 ಕಿ.ಮೀ ಅಂತರವಿರುತ್ತದೆ. ನಮ್ಮ ಊರಿನಿಂದ ನಾಗರಕೊಯಿಲು 20 ಕಿ.ಮೀಃ ದೂರ ಇರುತ್ತದೆ.

**26.** ಸಾಮಾನ್ಯವಾಗಿ ಯಾವುದೇ ಕಷ್ಟ ಬಂದಲ್ಲಿ ದೊಡ್ಡ ಮಗಳು ಮತ್ತು ಅಳಿಯ ಸಹಾಯಕ್ಕೆ ಬರುತ್ತಾರೆ ಎಂದರೆ ಸರಿ. ಅದೇ ರೀತಿ ನಮಗೆ ಯಾವುದೇ ಕಷ್ಟ ಬಂದರೆ ಅದನ್ನು ಮೊದಲಿಗೆ ಮೊದಲನೇ ಅಳಿಯ ಶಾಮ ನೇಸರಾಜುಗೆ ತಿಳಿಸುತ್ತೇವೆ ಎಂದರೆ ಸರಿ. ಬರುವಾಗ ನನ್ನ ಗಂಡನಿಗೆ ಎದೆ ನೋವು ಕಾಣಿಸಿಕೊಂಡಿದ್ದರಿಂದ ಚಿಕಿತ್ಸೆ ಕೊಡಿಸಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

**27.** ಬೆಂಗಳೂರಿಗೆ ಬಂದಾಗ ನಮ್ಮನ್ನು ದೊಡ್ಡಬಳ್ಳಾಪುರದ ಪೋಲಿಸ ಠಾಣೆಗೆ ಕರೆದುಕೊಂಡು ಬಂದ ಸಂಬಂಧಿಕರ ಹೆಸರು ಗೊತ್ತಿರುವುದಿಲ್ಲ ಆದರೆ ದೊಡ್ಡ ಅಳಿಯ ಶಾಮ ನೇಸರಾಜು ಅವರು ಏರ್ಪಾಟು ಮಾಡಿದ್ದರು. ನಾನು ಪೋಲಿಸ ಠಾಣೆಗೆ ದಿನಾಂಕಃ 13-04-2023 ರಂದು ಮುಂಜಾನೆ 02.30 ಕ್ಕೆ ಬಂದಾಗ ಪೋಲಿಸ ಠಾಣೆಯಲ್ಲಿ ಶಾಮ ಮರಿಯಾದಾಸ್, ಅವರ ತಂದೆ ತಾಯಿ ಇದ್ದರು. ದೂರಿನಲ್ಲಿ ಏನು ಬರೆದಿರುತ್ತದೆ ಎಂದು ಗೊತ್ತಿರುತ್ತದೆ.

**28.** ಕನ್ನಡದಲ್ಲಿ ಬರೆದ ದೂರಿನ ಅಂಶಗಳನ್ನು ನನಗೆ ತಮಿಳಿನಲ್ಲಿ ನಮ್ಮ ಸಂಬಂಧಿಕರು ಹೇಳಿರುತ್ತಾರೆ ಆದರೆ ಅವರ ಹೆಸರು ಈಗ ಗೊತ್ತಿರುವುದಿಲ್ಲ. ದೂರನ್ನು ಪೋಲಿಸರೇ ಬರೆದಿದ್ದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಬೆಂಗಳೂರಿಗೆ ಬಂದ ನಂತರ ಕೂಡಲೇ ನಾವು ಪೋಲಿಸ ಠಾಣೆಗೆ ಹೋಗಿರುತ್ತೇವೆ. ನಸುಕಿನ ಜಾವ 02.30 ಗಂಟೆಯಿಂದ ಬೆಳಗ್ಗೆ 09.30 ಗಂಟೆಯವರೆಗೆ ನಾನು ಠಾಣೆಯಿಂದ ಆಸ್ಪತ್ರೆಗೆ ಹೋಗಿ ಮಗಳನ್ನು

ನೋಡಿಕೊಂಡು ಬಂದಿರುತ್ತೇವೆ. ಪೋಲಿಸ ಠಾಣೆಯಿಂದ ಆಸ್ಪತ್ರೆಗೆ ನಮ್ಮನ್ನು ನಾವು ಬಂದಿದ್ದ ಕಾರಿನಲ್ಲಿಯೇ ಹೋಗಿರುತ್ತೇವೆ. ಸದರಿ ಕಾರಿನಲ್ಲಿ ನಾನು, ಶಾಮ ನೇಸರಾಜು, ಶಾಮ ನೇಸರಾಜು ಅವರ ಅಮ್ಮ ಮತ್ತು ಸಂಬಂಧಿಕರು ಇದ್ದೆವು. ಯಾವ ಆಸ್ಪತ್ರೆಯೆಂದು ಗೊತ್ತಿರುವುದಿಲ್ಲ.

**29.** ಪೋಲಿಸರು ನೋಟೀಸು ನೀಡಿರುವುದು ಗೊತ್ತಿರುವುದಿಲ್ಲ. ಪೋಲಿಸ ಠಾಣೆಯಿಂದ ಆಸ್ಪತ್ರೆ ಎಷ್ಟು ದೂರ ಇರುತ್ತದೆ ಎಂದು ಗೊತ್ತಿರುವುದಿಲ್ಲ. ಆಸ್ಪತ್ರೆಯಲ್ಲಿ ಎಷ್ಟು ಹೊತ್ತು ಇದ್ದೆವು ಎಂದು ಈಗ ನೆನಪಿರುವುದಿಲ್ಲ. ದಿನಾಂಕಃ 13-04-2023 ರಂದು ಬೆಳಗ್ಗೆ 09.00 ರಿಂದ 11.00 ಗಂಟೆಯವರೆಗೆ ಕಾರಿನಲ್ಲಿಯೇ ಇದ್ದೆವು. ಠಾಣೆಯಲ್ಲಿ ಎಷ್ಟು ಸಹಿ ಮಾಡಿದ್ದೇನೆ ಎಂದು ಗೊತ್ತಿರುವುದಿಲ್ಲ. ನಾನು ಎಲ್ಲಾ ಸಹಿಗಳನ್ನು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಒಂದು ಸಹಿಯನ್ನು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ ಮತ್ತೊಂದು ಸಹಿಯನ್ನು ಸಂಬಂಧಿಕರು ನೀಡಿದ ದಾಖಲೆಗೆ ಮಾಡಿರುತ್ತೇನೆ ಅದು ಎಲ್ಲಿ ಎಂದು ಈಗ ನೆನಪಿರುವುದಿಲ್ಲ.

**30.** ಶಾಮ ಮರಿಯಾದಾಸನು ನಮ್ಮ ಮಗಳನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದನು ಎಂದರೆ ಮೊದಲು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು ನಂತರ ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ. ನಮ್ಮ ಮಗಳು ಜನೀಲಾ ಜೊಬಿಗೆ ಇಂಗ್ಲೀಷ ಚೆನ್ನಾಗಿ ಬರುವುದಿಲ್ಲವೆಂದು ಆಕೆಯನ್ನು ಇಂಗ್ಲೀಷ ಕೋಚಿಂಗ್ ಗೆ ಸೇರಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಮಗಳು ರೇಡಿಯೋಥೆರಪಿ ಓದಿದ್ದರಿಂದ ಸೌದಿ ಅರೇಬಿಯಾದಲ್ಲಿ ಕೆಲಸಕ್ಕೆ ಸೇರಬೇಕಾಗಿ ಪಾಸ್ ಪೋರ್ಟ ಗಾಗಿ ದಾಖಲೆಗಳನ್ನು ತೆಗೆದುಕೊಳ್ಳಲು 16 ಮಾರ್ಚ 2023 ರಿಂದ 15 ದಿನಗಳವರೆಗೆ ನಮ್ಮ ಊರಿನಲ್ಲಿಯೇ ಇದ್ದಳು ಎಂದರೆ ಸರಿಯಲ್ಲ.

**31.** ನಮ್ಮ ಮಗಳ ಮುಂದಿನ ವಿದ್ಯಾಭ್ಯಾಸಕ್ಕೆ ಮತ್ತು ಕೆಲಸಕ್ಕಾಗಿ ಏನೇ ಹೇಳಬೇಕಾಗಿದ್ದರೂ ಸಹ ಅದನ್ನು ದೊಡ್ಡ ಅಳಿಯ ಶಾಮ ನೇಸರಾಜುನಲ್ಲಿಯೇ ಕೇಳಬೇಕೆಂದು ನಾನು ಶಾಮ ಮರಿಯಾದಾಸ ಮತ್ತು ಅವರ ಕುಟುಂಬದಲ್ಲಿ ಹೇಳಿದ್ದೆನು ಎಂದರೆ ಸರಿಯಲ್ಲ. ದೊಡ್ಡಬಳ್ಳಾಪುರಕ್ಕೆ ನಾವು ರಾತ್ರಿ ಬಂದು ಮರುದಿನ 14 ನೇ ತಾರೀಖಿನಂದು ರಾತ್ರಿ ಹೋಗಿರುತ್ತೇವೆ.

**32.** ಅಮಾನತ್ತುಪಡಿಸಿಕೊಂಡ 3 ಮೊಬೈಲ್‌ಗಳ ಕಂಪನಿಯ ಹೆಸರು ಹೇಳಲು ಬರುತ್ತದೆ. 1. ರೆಡ್ ಮಿ ಇರುತ್ತದೆ, 2. ಸ್ಯಾಮ್‌ಸಂಗ್ ಗ್ಯಾಲರಿ ಇರುತ್ತದೆ, 3. ಯಾಪಲ್ ಐ ಫೋನ್ ಇರುತ್ತದೆ. ನ್ಯಾಯಾಲಯದ ಮುಂದಿರುವ ಮೊಬೈಲ್ ಗಳಲ್ಲಿ ಯಾವ ಯಾವ ಕಂಪನಿಯ ಮೊಬೈಲ್‌ಗಳು ಎಂದು ಗುರುತಿಸಲು ಬರುತ್ತದೆ. ಈಗ ನೋಡುತ್ತಿರುವ ಮೊಬೈಲ್ ರೆಡ್ ಮಿ ಕಂಪನಿಯ ಮೊಬೈಲ್ ಇರುತ್ತದೆ. ಸದರಿ ಮೊಬೈಲ್ ಅನ್ನು ಮುದ್ದೆ ಮಾಲು 13 ಎಂದು ಗುರುತಿಸಲಾಗಿರುತ್ತದೆ. ಉಳಿದವುಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

**33.** ಸದರಿ ಮೊಬೈಲ್‌ಗಳು ರೂಮಿನ ಯಾವ ಮೂಲೆಯಲ್ಲಿ ಮತ್ತು ಎಲ್ಲಿ ಇದ್ದವು ಎಂದು ಈಗ ಹೇಳಲು ಬರುವುದಿಲ್ಲ. ರೂಮಿನಲ್ಲಿ ಎಲ್ಲಾ ರಕ್ತ ಇತ್ತು ಆದ್ದರಿಂದ ಎಲ್ಲಿಂದ ರಕ್ತ ತೆಗೆದಿರುತ್ತಾರೆ ಎಂದು ಈಗ ನೆನಪಿರುವುದಿಲ್ಲ. ನಾನು ಸಹಿ ಮಾಡಿದ ಮಹಜರಿಗೆ ಬೇರೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಶಾಮ ಮರಿಯಾದಾಸ ರವರ ತಾಯಿಯ ಊರಿನಲ್ಲಿರುವ ಮನೆಗೆ ನಾನು ಹೋಗಿರುವುದಿಲ್ಲ.

**34.** ದಿನಾಂಕಃ 10-04-2023 ರಂದು ಶಾಮ ಮರಿಯಾದಾಸ ರವರ ತಾಯಿಯ ಊರಿನಲ್ಲಿರುವ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಆದಿನ ಅವರ ಮನೆಗೆ ಹೋಗಿದ್ದಾಗ ಊರಿನಲ್ಲಿರುವ ಅವರ ತಾಯಿಯ ಮನೆಯಲ್ಲಿಯೇ ನನ್ನ ಮೊಬೈಲ್ ಅನ್ನು ಬಿಟ್ಟಿದ್ದೆನು ಎಂದರೆ ಸರಿಯಲ್ಲ. ಅವರ ಮನೆಯಲ್ಲಿ ನಾನು ಫೋನ್ ಬಿಟ್ಟು ಬಂದಿದ್ದರಿಂದ ಶಾಮ ಮರಿಯಾದಾಸರವರ ತಾಯಿಯ ಸಂಬಂಧಿಕರು  ಶಾಮ ಮರಿಯಾದಾಸರ ತಾಯಿಗೆ ಫೋನ್ ಮಾಡಿ ಸದರಿ ಫೋನ್ ಅನ್ನು ತೆಗೆದುಕೊಂಡು ಹೋಗುವಂತೆ ನನಗೆ ಫೋನ್ ಮಾಡಲು ಹೇಳಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ನಮ್ಮ ಮಗಳು ಜನೀಲಾ ಜೋಬಿ ಅವರು ಅವರ ತಂದೆಗೆ ಫೋನ್ ಮಾಡಿ ಹೋಗಿ ಫೋನ್ ತೆಗೆದುಕೊಂಡು ಬರುವಂತೆ ದಿನಾಂಕಃ 10-04-2023 ರಂದು ನನ್ನ ಗಂಡನಿಗೆ ಫೋನ್ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಅದಕ್ಕೆ ಮುಂದುವರೆದು ನನ್ನ ಮಗಳು ಜನೀಲಾ ಜೋಬಿ ನನ್ನ ಗಂಡನಿಗೆ ದಿನಾಂಕಃ 11-04-2023ರ ಸಂಜೆ 07.30 ಗಂಟೆ ಸಮಯದಲ್ಲಿ ಫೋನ್ ಮಾಡಿ ಸದರಿ ಫೋನ್ ಅನ್ನು ತೆಗೆದುಕೊಂಡಿದ್ದೀರಾ ಎಂದು ಕೇಳಿರುತ್ತಾಳೆ ಎಂದರೆ ಸರಿಯಲ್ಲ. ಆದಿನ ಆ ಸಮಯದಲ್ಲಿ ಹೆಚ್ಚು ಮಾತನಾಡದೇ ಕೇವಲ 1 ನಿಮಿಷ ಮಾತ್ರ ಮಾತನಾಡಿರುತ್ತಾಳೆ ಎಂದರೆ ಸರಿಯಲ್ಲ.

**35.** ಶಾಮ ಮರಿಯಾದಾಸನು ಯಾವುದೇ ಹೆಣ್ಣು ಮಗಳ ಜೊತೆ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಾಕ್ಷಿದಾರರು ಮುಂದುವರೆದು ಹಮೀದಾ ಎಂಬ ಮುಸ್ಲಿಂ ಹುಡುಗಿಯೊಂದಿಗೆ ಮಾತನಾಡುತ್ತಿದ್ದ ಎಂದು ನನ್ನ ಮಗಳು ನನಗೆ ಹೇಳಿದ್ದಳು ಎಂದು ತಿಳಿಸಿರುತ್ತಾರೆ. ನಮ್ಮ ಮಗಳು ಜನೀಲಾ ಜೊಬಿಯ ಜೊತೆ ಹಮಿದಾ ಜೊತೆ ಮಾತನಾಡುತ್ತಿದ್ದಳು ಎಂದರೆ ಫ್ರೆಂಡ್ ರೀತಿ ಮಾತನಾಡುತ್ತಿದ್ದಳು.

**36.** ಶಾಮ ಮರಿಯಾದಾಸನ ಬೇರೆ ಸ್ನೇಹಿತರು ಮತ್ತು ಹಮೀದಳು ಮದುವೆಗೆ ಕನ್ಯಾಕುಮಾರಿಗೆ ಬಂದಿದ್ದರು ಎಂದರೆ ಬಂದಿದ್ದರು ಎಂದು ಹೇಳಿರುತ್ತಾರೆ ಆದರೆ ಅವರನ್ನು ನಾನು ನೋಡಿರುವುದಿಲ್ಲ. ಮದುವೆಯ ನಂತರವೂ ಸಹ ಶಾಮ ಮರಿಯಾದಾಸ ಮತ್ತು ನಮ್ಮ ಮಗಳು ಜನೀಲಾ ಜೋಬಿ ಅವರು ಹಮೀದಾ ಅವರ ಮನೆಗೆ ಹಬ್ಬ ಹರಿದಿನಗಳಲ್ಲಿ ಹೋಗಿ ಬರುತ್ತಿದ್ದರು ಎಂದರೆ ನಮ್ಮ ಮಗಳು ಹೋಗುತ್ತಿರಲಿಲ್ಲ. ಅದೇ ರೀತಿ ಹಬ್ಬ ಹರಿದಿನಗಳಲ್ಲಿ ಶಾಮ ಮರಿಯಾದಾಸನ ಸ್ನೇಹಿತರು ಅವರ ಮನೆಗೆ ಬರುತ್ತಿದ್ದರು ಮತ್ತು ಅವರೆಲ್ಲರೊಂದಿಗೆ ನಮ್ಮ ಮಗಳು ಚೆನ್ನಾಗಿ ಮಾತನಾಡುತ್ತಿದ್ದಳು ಎಂದರೆ ನನಗೆ ಗೊತ್ತಿರುವುದಿಲ್ಲ.

**ಎಸ್.ಸಿ 10004/2024**

ಪ್ರಾಸಾಃ 5

**37.** ದಿನಾಂಕಃ 11-04-2023 ರ ವರೆಗೂ ಸಹ ತನಗೆ ತನ್ನ ಗಂಡ ಶಾಮ ಮರಿಯಾದಾಸನು ಹೊಡೆಯುತ್ತಿದ್ದನೆಂದು ನಮ್ಮ ಮಗಳು ನನಗೆ ಫೋನ್ ಮೂಲಕ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳನ್ನು ಶಾಮ ಮರಿಯಾದಾಸರ ಮನೆಗೆ ಮಾರ್ಚನಲ್ಲಿ ಬಂದಾಗ 2023 ರ ಏಪ್ರೀಲ್ ಮೊದಲ ವಾರದವರೆಗೂ ಸಹ ನಾನು ಶಾಮ ಮರಿಯಾದಾಸರ ಮನೆಯಲ್ಲಿಯೇ ಇದ್ದೆನು ಎಂದರೆ ಸರಿಯಲ್ಲ.

**38.** ಪೋಲಿಸರು ಈ ರೀತಿ ಸಾಕ್ಷಿ ಹೇಳು ಎಂದು ನನಗೆ ಹೇಳಿದ್ದರಿಂದ ಈ ದಿನ ನಾನು ಅವರು ಹೇಳಿದಂತೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ವಾಟೀ ಸವಾಲು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ